

**ಗಂಡಸುತನ ಉಪಯೋಗಿಸಿದರೆ ಸುಖ ಪಡೆದುಕೊಳ್ಳಲು ಆದೀತೇ ವಿನಾ ಬಾಂಧವ್ಯವನ್ನು ಕಟ್ಟಿಕೊಳ್ಳಲು ಆಗುವುದಿಲ್ಲ!**

ಡಾ.ವಿನೋದ ಛೆಬ್ಬಿ

# 202: ಪುರುಷರ ನಾಕನರಕ-11

ಮಧ್ಯವಯಸ್ಸು ದಾಟುತ್ತಿರುವ ಪಂಡಿತ ದಂಪತಿಯಲ್ಲಿ ಕಾಮಕೂಟವು ಸತತವಾಗಿ ನಡೆಯುತ್ತಿದ್ದರೂ ಲೈಂಗಿಕ ಸಾಮರಸ್ಯ ಇಲ್ಲದೆ ಹೆಂಡತಿಗೆ ಕಾಮಾಸಕ್ತಿ ಮೂಡಿಸುವ ಉಪಾಯ ಕಂಡುಕೊಳ್ಳಲು ಪಂಡಿತರು ನನ್ನ ಹತ್ತಿರ ಬಂದಿದ್ದಾರೆ.

ನನಗೆ ಸ್ಪಷ್ಟವಾಯಿತು: ಕಾಮೇಚ್ಛೆಯ ಇಂಗಿತ ಅವರದು, ಹೆಂಡತಿಯದಲ್ಲ. ಆಕೆಯ ಇಂಗಿತ ಕಾಮೇಚ್ಛೆ ಬೇಡವಾಗಿ ಇರುವುದು. ಹಾಗಾಗಿ ಪಂಡಿತರ ಧಾವಂತ. ತಟ್ಟೆಯಲ್ಲಿರುವ ಅನ್ನವನ್ನೆಲ್ಲ ಉಣ್ಣಿಸಲೇಬೇಕು ಎಂದು ತಾಯಿಯು ಮಗುವಿನ ಬಾಯಲ್ಲಿ ತುತ್ತು ತುರುಕುವ ದೃಶ್ಯ ನೆನಪಾಯಿತು. ನಾನು ಕೇಳಿದೆ: 'ಕಾಮಾಸಕ್ತಿ ಪೂರೈಸಿಕೊಳ್ಳಬೇಕು ಎನ್ನುವುದು ನಿಮ್ಮ ಗುರಿ, ಆಕೆಯದಲ್ಲ. ಆಕೆಗೇ ಬೇಡವಾದ ಗುರಿಯ ಬಗೆಗೆ ಆಕೆಯಲ್ಲಿ ಪ್ರೇರಣೆ ತರಿಸಲು ಹೇಗೆ ಸಾಧ್ಯ?' ಅವರಿಗೆ ಅರ್ಥವಾಗಲಿಲ್ಲ. ಉದಾಹರಣೆ ಕೊಟ್ಟೆ. 'ನೀವು ಎಂದಾದರೂ ಕಾಯಿಲೆಯಿಂದ ಹಸಿವೆ ಇಲ್ಲದೆ ಮಲಗಿರಬೇಕಲ್ಲ? ಆಗ ನಿಮ್ಮಾಕೆಯು ಊಟ ತಿನ್ನಲೇಬೇಕೆಂದು ಬಲಾತ್ಕಾರ ಮಾಡಿದರೆ ಅವರಿಗೋಸ್ಕರ ತಿನ್ನಬಲ್ಲಿರಾ?' ಅವರಿಗೆ ಅರ್ಥವಾಯಿತಾದರೂ ಮನಸ್ಸಿಗೆ ತಟ್ಟಲಿಲ್ಲ. ಹೆಂಡತಿಯ ಮನಸ್ಸು ಮುಖ್ಯವಲ್ಲ, ಆಕೆ ಶಾರೀರಿಕವಾಗಿ ಸಹಕರಿಸಿದರೆ ಸಾಕು ಎನ್ನುವ ಮನೋಭಾವ ಇದ್ದಂತಿತ್ತು, ಆದುದರಿಂದ ಸಮಸ್ಯೆಯ ಇನ್ನೊಂದು ಮಗ್ಗುಲನ್ನೂ ಅರಿವು ಮಾಡಿಕೊಟ್ಟೆ. ಇವರ ಒತ್ತಾಯಕ್ಕೆ ಒಪ್ಪಿಕೊಂಡು ಸಹಕರಿಸುವಾಗ ನಡೆಯುವ ಕೂಟವು ಆಕೆಯ ಕೂಟವಲ್ಲ. ಇಬ್ಬರದಂತೂ ಖಂಡಿತವಲ್ಲ. ಆಕೆಯ ಮನಸ್ಸಿನ ವಿರುದ್ಧವಾದ ಇವರೊಬ್ಬರದೇ ಕೂಟ ಆಗಿಬಿಡುತ್ತದೆ. ಹಾಗಾಗಿ ಇದೊಂದು ಪ್ರಾಬಲ್ಯದಾಟ, ಜಿದ್ದಾಜಿದ್ದಿನ ಮೇಲಾಟ. ಒಲ್ಲದವಳ ಮೇಲೆ ಒತ್ತಾಯ ನಡೆಸಿ ಗೆಲ್ಲುವಾಟ. ಇವರು ಗೆದ್ದರೆ ಆಕೆ ಸೋಲುತ್ತಾಳೆ. ಪರಿಣಾಮ? ಇವರು ಕಾಮಕೂಟದಲ್ಲಿ ಆಕೆಯನ್ನು ಹಣಿದರೆ ಆಕೆ ಆರ್ಥಿಕ ಕೂಟದಲ್ಲಿ ಇವರನ್ನು ಹಣಿಯುತ್ತಿದ್ದಾಳೆ. ಸುಖ ಎಲ್ಲಿಂದ ಬಂದೀತು?

ಈ ವಿಚಾರ ಪಂಡಿತರಿಗೆ ಮನದಟ್ಟಾಯಿತು. ಆಗವರು ಇನ್ನೊಂದು ವಿಚಾರವನ್ನು ಮಂಡಿಸಿದರು. ಹೆಂಡತಿಯಲ್ಲಿ ಕಾಮಾಸಕ್ತಿ ಮೂಡಿದರೆ ಫಲಶ್ರುತಿ ಏನಾಗಬಹುದು? ಆಕೆ ಇವರೊಂದಿಗೆ ಅದನ್ನು ಹಂಚಿಕೊಳ್ಳುವುದಕ್ಕೆ ಮನಸ್ಸು ಮಾಡಬಹುದು ಅಥವಾ ಮಾಡದಿರಬಹುದು. ಮನಸ್ಸು ಮಾಡಿದರೆ ತಾನೇ ಇವರ ಹತ್ತಿರವಾಗಬಹುದು. ಆಗ ಪಂಡಿತರಿಗೆ ಉತ್ಕಟತೆ, ರೋಚಕತೆ ಎನ್ನಿಸುತ್ತದೆ. ಆದರೆ ವಯಸ್ಸಾಗುತ್ತಿದೆ ಎಂಬ ಅನಿಸಿಕೆ ಇದೆಯಲ್ಲ, ಅದರಿಂದ ಸತತವಾಗಿ ಸ್ಪಂದಿಸಲು ಆದೀತೆ ಎಂದು ಆತ್ಮಶಂಕೆ ಕ್ರಮೇಣ ಹುಟ್ಟುತ್ತದೆ. ಆಗ ಗಂಡಸುತನದ ಬಲದಿಂದ ಸ್ವಾಮ್ಯ ಸಾಧಿಸಿರುವ ಏಕೈಕ ಕ್ಷೇತ್ರದಲ್ಲೂ ಪ್ರಾಬಲ್ಯ ಕಳೆದುಕೊಂಡು ಹಿಂತೆಗೆಯುವ ಸಂಭವವಿದೆ. ಹಾಗಾದರೂ ಸಾಮರಸ್ಯ ಬರಲು ಕಠಿಣವಾಗುತ್ತದೆ ಎಂದು ಅರಿವು ಮೂಡಿಸಿದೆ. ಮತ್ತೆ ಅವರಿಗೆ ಬುದ್ಧಿ ತೋಚದೆ ಕುಳಿತರು. ಮುಂದಿನ ಹಾದಿ ಹೇಗೆ?

ಹಾದಿ ಹುಡುಕುವ ನಿಟ್ಟಿನಲ್ಲಿ ಇನ್ನೊಂದು ಪರಿಕಲ್ಪನೆಯನ್ನು ಮುಂದಿಟ್ಟೆ. ಅದು ಅವರ ಗಂಡಸುತನದ ಬಗೆಗೆ. ಬಾಲ್ಯದಲ್ಲಿ ನೋವನ್ನು ಉಂಡು ಬೆಳೆದ ಅವರಿಗೆ ಗಂಡಸಾಗಿ ಹುಟ್ಟಿದ್ದೇ ವರವಾಗಿದೆ. ಗಂಡಸು ಆದುದರಿಂದ ಬೆಳೆಯಲು ಅವಕಾಶಗಳು ಸಿಕ್ಕಿವೆ. ಅದರಿಂದಲೇ ಹೆಣ್ಣು ಹುಡುಕಿಕೊಂಡು ಬಂದಿದ್ದಾಳೆ, ಮದುವೆಯೂ ಆಗಿದೆ. ಪುರುಷ ಪ್ರಾಬಲ್ಯದಿಂದ ಸಂಸಾರವನ್ನೂ ನಡೆಸುತ್ತಿದ್ದಾರೆ. ಆದರೆ ಅದೇ ಗಂಡಸುತನ ಅವರಿಗೀಗ ಅಡ್ಡಿಯಾಗುತ್ತಿದೆ. ಹೇಗೆ? ಹೆಣ್ಣಿನಿಂದ ಕಾಮಸುಖವನ್ನು ಪಡೆದುಕೊಳ್ಳುವ ಅವರ ಗಂಡಸುತನದ ಹಕ್ಕುಬಾಧ್ಯತೆಯೇ ಭಾವನಾತ್ಮಕ ಬಾಂಧವ್ಯವನ್ನು ಕಟ್ಟಿಕೊಳ್ಳಲು ಅಡ್ಡಿ ಆಗುತ್ತಿದೆ. 'ನಿಮ್ಮ ಗಂಡಸುತನದಿಂದ ಸುಖ ಪಡೆದುಕೊಳ್ಳಬಹುದೇ ವಿನಾ ನನ್ನನ್ನು ಪಡೆದುಕೊಳ್ಳಲಾರಿರಿ!' ಎಂದು ಹೆಂಡತಿ ಸಂದೇಶ ನೀಡುತ್ತಿದ್ದಾಳೆ!

ಇದನ್ನು ತಿಳಿಸಿ ಹೇಳಿದಾಗ ಪಂಡಿತರಿಗೆ ದಿಗ್ಭ್ರಮೆಯಾಯಿತು. ಗಂಡಸುತನ ತನ್ನ ಹುಟ್ಟುಗುಣ. ಅದರಿಂದಾಗಿಯೇ ಒಂದು ಹೆಣ್ಣು ತನ್ನನ್ನು ಒಪ್ಪಲು, ತನ್ನೊಂದಿಗೆ ಮಲಗಲು ಸಾಧ್ಯವಾಗಿದೆ ಎಂದೆಲ್ಲ ವಾದಿಸಿದರು. 'ನಾನು ಗಂಡಸು, ನೀನು ಹೆಣ್ಣು, ಹಾಗಾಗಿ ಸುಖ ಕೊಡಲೇಬೇಕು ಎಂದು ಹೇಳುತ್ತಿದ್ದೀರಷ್ಟೆ. ನಿಮ್ಮವಳು ನಿಮ್ಮನ್ನು ಬಿಟ್ಟು ಯಾರನ್ನೇ ಮದುವೆಯಾದರೂ ಹೆಣ್ಣಾದುದಕ್ಕೆ ಆಕೆಗೆ ಕಾಮಕೂಟದಲ್ಲಿ ಒಪ್ಪಿಸಿಕೊಳ್ಳುವ ಅನಿವಾರ್ಯತೆ ಇದ್ದೇ ಇರುತ್ತಿತ್ತು. ಉಳಿದ ಗಂಡಸರಿಗಿಂತ ನೀವು ಹೇಗೆ ಭಿನ್ನವಾದಿರಿ?' ಎಂದು ಸವಾಲೆಸೆದೆ. ಅದಕ್ಕೆ ಅವರಲ್ಲಿ ಉತ್ತರ ಇರಲಿಲ್ಲ.

'ಪಂಡಿತರೇ, ನಿಮ್ಮ ಗಂಡಸುತನವನ್ನೂ, ಅದರ ಮೂಲಕ ಪಡೆದುಕೊಂಡಿರುವ ಹಕ್ಕುಬಾಧ್ಯತೆಗಳನ್ನೂ, ವಯಸ್ಸಾದಂತೆ ಕ್ಷೀಣಿಸುವ ಲೈಂಗಿಕ ಸಾಮರ್ಥ್ಯದ ಭಯವನ್ನೂ ಮರೆತುಬಿಡಿ. ನೀವು ಆಕೆಯೊಡನೆ ವೈಯಕ್ತಿಕವಾಗಿ ಬೆಳೆಸಿಕೊಂಡು ಬಂದ ಭಾವನೆಗಳಿಂದ, ನಿಮ್ಮ ಮೌಲ್ಯಗಳಿಂದ ಆಕೆಯನ್ನು ಸಮೀಪಿಸಲು ಆದೀತೆ? ಅಂದರೆ, ನಾನು ಗಂಡು, ಆಕೆ ಹೆಣ್ಣು ಎನ್ನುವುದನ್ನು ಬಿಟ್ಟು ಇತರ ಯಾವುದೇ ಸಂಬಂಧಗಳು ನಿಮ್ಮಲ್ಲಿ ಇವೆಯೆ?'

ಪಂಡಿತರಿಗೆ ಥಟ್ಟನೆ ಹೊಳೆಯಿತು: 'ಯಾಕಿಲ್ಲ, ಆಕೆಯನ್ನು ನಾನು ತುಂಬಾ ಪ್ರೀತಿಸುತ್ತೇನೆ..' ಎಂದರು. ಅವರ ಗಂಟಲು ಗದ್ಗದವಾಗಿದ್ದು ಎದ್ದುಕಂಡಿತು. ಅದನ್ನು ಮೆಚ್ಚಿಕೊಳ್ಳುವಷ್ಟರಲ್ಲಿ ಇನ್ನೊಂದು ಮಾತು ಸೇರಿಸಿದರು: 'ಆಕೆಯನ್ನು ತಬ್ಬಿಕೊಂಡು ಮಲಗಿದರೆ ಆರಾಮವಾಗಿ ಖುಷಿಯಿಂದ ಮಲಗುತ್ತಾಳೆ.' ಇದರರ್ಥ ಏನೆಂದು ಚರ್ಚಿಸಿದೆವು. ಆಕೆಗೆ ಗಂಡ ಬೇಕು, ಗಂಡನ ಸಾಮೀಪ್ಯ ಬೇಕು, ತಬ್ಬುಗೆ ಬೇಕು, ಆದರೆ ಕಾಮೇಚ್ಛೆಯ ಪೂರೈಕೆಗೆ ಒತ್ತಾಯ ಬೇಡ!

ಇನ್ನೇನು, ತಡವಿಲ್ಲದೆ ಯೋಜನೆ ತಯಾರಾಯಿತು. ಏನದು? ಪಂಡಿತರು ತಮ್ಮ ಹುಟ್ಟುಸ್ವಭಾವದ ಗಂಡಸುತನವನ್ನೂ, ಅದರೊಂದಿಗೆ ಸಮಾಜದಿಂದ ಬಳುವಳಿಯಾಗಿ ಬಂದಿರುವ (ಕಾಮೇಚ್ಛೆಯ ಬೇಡಿಕೆ ಒಳಗೊಂಡು) ಎಲ್ಲ ಹಕ್ಕುಬಾಧ್ಯತೆಗಳನ್ನು ಬಿಟ್ಟುಕೊಡಬೇಕು. ಬದಲಾಗಿ ತಾವಿಬ್ಬರೂ ನಿರ್ಲಿಂಗಿ ವ್ಯಕ್ತಿಗಳೆಂಬ ಭಾವವನ್ನು ತಂದುಕೊಳ್ಳಬೇಕು. ಲಿಂಗಭೇದವನ್ನು ಬದಿಗಿಟ್ಟು ನಿರ್ವ್ಯಾಜ ಪ್ರೇಮ ಶುರುಮಾಡಬೇಕು. ಶಾರೀರಿಕ ಬಯಕೆಗಳನ್ನು ಮೀರಿ, ಒಂದು ಶುದ್ಧಾತ್ಮವು ಇನ್ನೊಂದು ಶುದ್ಧಾತ್ಮವನ್ನು ಬಯಸುವಂತೆ ಆಗಬೇಕು. ಇದನ್ನು ವರ್ತನೆಯಲ್ಲಿ ಹೇಗೆ ಅಳವಡಿಸಿಕೊಳ್ಳುವುದು ಎಂದು ಚರ್ಚಿಸಿದೆವು. ಪಂಡಿತರಿಗೆ ಹಳೆಯ ಸಂದೇಹ ಮರುಕಳಿಸಿತು: ವಯಸ್ಸಾದಂತೆ ಗಂಡಸುತನ ಕಡಿಮೆಯಾಗುತ್ತಿದೆ. ಹಾಗಾಗಿ ಕಳೆದುಹೋಗುವುದಕ್ಕಿಂತ ಮುಂಚೆ ಪೂರೈಸಿಕೊಳ್ಳದಿದ್ದರೆ? ಅದಕ್ಕೆ ನಾನು ವಿವರಿಸಿದೆ. ನಿಜವಾಗಲೂ ಹೇಳಬೇಕೆಂದರೆ ದಂಪತಿಗಳ ನಡುವೆ ನಿರ್ವ್ಯಾಜ ಬಾಂಧವ್ಯ ಹಾಗೂ ಶುದ್ಧ ಅನುಬಂಧ ಶುರುವಾಗುವುದೇ ಅರವತ್ತರ ನಂತರ.

ಇನ್ನು, ಅದನ್ನೆಲ್ಲ ಹೇಗೆ ಜಾರಿಗೆ ತರುವುದು? ಪಂಡಿತರು ಹೆಂಡತಿಯೊಡನೆ ಮನಸ್ಸು ಬಿಚ್ಚಿ ಮಾತಾಡಬೇಕು. ತಮ್ಮ ಬಲವಂತಕ್ಕೆ ಕಾರಣವಾದ ಗಂಡಸುತನವನ್ನು ಬಿಟ್ಟುಕೊಡುವ ನಿರ್ಧಾರವನ್ನು ಪ್ರಕಟಿಸಬೇಕು. ಆಕೆಗೆ ಕರಾರಿಲ್ಲದ ಪ್ರೀತಿಯನ್ನು ಪ್ರಕಟಿಸಬೇಕು. ಅವಳನ್ನು ಗೌರವಿಸಬೇಕು. ದಿನವೂ ತಬ್ಬಿಕೊಂಡು ಪ್ರೀತಿಯ ಮಳೆಗರೆಯಬೇಕು. ಇತ್ಯಾದಿ.

ಇದರ ಫಲಶ್ರುತಿ ಏನಾಗಬಹುದು? ಇದರಿಂದ ಆಕೆಯ ಸಬಲೀಕರಣ ಆಗಲು ಅನುಕೂಲ ಆಗುತ್ತದೆ. ಆಗಾಕೆ ಮುಕ್ತಮನಸ್ಸಿನಿಂದ ಇವರನ್ನು ಬಯಸುತ್ತಾಳೆ. ಇವರ ಹತ್ತಿರವಾಗುತ್ತಾಳೆ. ಇಷ್ಟೆಲ್ಲ ನಡೆಯುವಾಗ ಆಕೆಯಲ್ಲಿ ಕಾಮಾಪೇಕ್ಷೆ ಹುಟ್ಟುತ್ತದೆಯೇ ಎಂದು ಕೇಳಿದ್ದಕ್ಕೆ ನನ್ನ ಉತ್ತರ ಸರಳವಾಗಿತ್ತು: ಹೆಣ್ಣುಗಂಡೆನ್ನದೆ, ಚಿಕ್ಕವರುದೊಡ್ಡವರು ಎನ್ನದೆ ಪ್ರತಿಯೊಬ್ಬರಿಗೂ ಕಾಮೇಚ್ಛೆಯಿದೆ. ಕಾಮೇಚ್ಛೆ ಹುಟ್ಟುಗುಣ. ಅದು ಸಹಜವಾಗಿಯೇ ಪ್ರಕಟವಾಗುತ್ತದೆ ಅದನ್ನು ಹತ್ತಿಕ್ಕುವ ಘಟನೆಗಳು ನಡೆಯದಿದ್ದರೆ! ಎಲ್ಲಕ್ಕಿಂತ ಮುಖ್ಯವಾಗಿ ಕಾಮಕೂಟದಲ್ಲಿ ಒಳಗೊಳ್ಳುವ ನಿರ್ಧಾರ ಆಕೆಯದೇ ಆಗಬೇಕು ಎಂದು ನೆನಪುಮಾಡಿಕೊಟ್ಟೆ.

ಹೀಗೆ, ಪುರುಷ ಪ್ರಾಧಾನ್ಯತೆಯ ಕಾಮಕೂಟವನ್ನು ಬಿಡದ ಹೊರತೂ ಅನ್ಯೋನ್ಯತೆಯ ಕಾಮಸಂಬಂಧ ಶುರುವಾಗಲಾರದು!

ಉಚಿತ ಸಹಾಯವಾಣಿಗೆ ಕರೆಮಾಡಿ: 8494944888.